ಇ) ಮಂಡಳಿಯ ಆರ್ಥಿಕ ಮುಗ್ಗಟ್ಟಿನಿಂದ ಸದರಿ ನಿರ್ಮಾಣಕಾರ್ಯವನ್ನು ಪ್ರಾರಂಭಿಸುವಲ್ಲಿ 9ನೇ ಯೋಜನೆಯಡಿಯಲ್ಲಿ ಈ ಕಾಮಗಾರಿಯನ್ನು ಸೇರಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಪ್ರಶ್ನೆ 'ಇ' ಭಾಗಕ್ಕೆ ಉತ್ತರಿಸಿರುವುದರಿಂದ ಇದು ಉದ್ಭವಿಸುವುದಿಲ್ಲ.

ಕೇಸರಿ ಹಾಗೂ ಹಸಿರು ಪಡಿತರ ಚೀಟಿ

2109 - ಶ್ರೀ ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೇಸರಿ ಹಾಗೂ ಹಸಿರು ಪಡಿತರ ಕಾರ್ಡುಗಳಿಗೆ ಜೀವನಾವಶ್ಯಕ ವಸ್ತುಗಳನ್ನು ಒದಗಿಸುವ ಪ್ರಮಾಣವೆಷ್ಟು?*

ಆ) *ಇದನ್ನು ಹೆಚ್ಚಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೆ?*

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ)

	ಹಸಿರು ಕಾರ್ಡು	ಕೇಸರಿ ಕಾರ್ಡು
ಅಕ್ಕಿ	8 ಕೆ.ಜಿ.	2½ ಕೆ.ಜಿ. ರಿಂದ 4 ಕೆ.ಜಿ..
ಗೋಧಿ	2 ಕೆ.ಜಿ.	
ಸಕ್ಕರೆ	1½ ರಿಂದ 2ಕೆ.ಜಿ.	1½ ರಿಂದ 2 ಕೆ.ಜಿ.
ಸೀಮೆಎಣ್ಣೆ	3½ ರಿಂದ 5 ಲೀಟರ್	3½ ರಿಂದ 5 ಲೀಟರ್

ಆ) ದಿನಾಂಕ 1.6.1997 ರಿಂದ ನಿರ್ದಿಷ್ಟಿತ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಜಾರಿಗೆ ತಂದಂದಿನಿಂದ ಭಾರತ ಸರ್ಕಾರವು ರಾಜ್ಯದ ಆಹಾರ ಧಾನ್ಯಗಳ ಹಂಚಿಕೆಯನ್ನು 1,52,260 ಮೆ.ಟನ್‌ಗಳಿಂದ 75,000 ಮೆ. ಟನ್‌ಗಳಿಗೆ ಕಡಿತ ಮಾಡಿರುತ್ತದೆ. ಕೇಸರಿ ಪಡಿತರ ಚೀಟಿಗಳಿಗೆ ಮಾಹೆಯಾನ 10 ಕೆ.ಜಿ.ಯಂತೆ ವಿತರಣೆಯಾಗಲು ಸಾಧ್ಯವಾಗುವಂತೆ ರಾಜ್ಯದ ಈಗಿನ ಆಹಾರ ಧಾನ್ಯಗಳ ಹಂಚಿಕೆಯನ್ನು ಮಾಹೆಯಾನ 1,20,000 ಮೆ.ಟನ್‌ಗಳಿಗೆ ಹೆಚ್ಚಿಸಬೇಕೆಂದು ಮನವಿ ಮಾಡಲಾಗಿದೆ. ಭಾರತ ಸರ್ಕಾರದ ತೀರ್ಮಾನದ ನಿರೀಕ್ಷೆಯಲ್ಲಿದ್ದೇವೆ.

ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ

2111 - ಶ್ರೀ ರಾಜಶೇಖರ್ ವಿ. ಶೀಲವಂತ (ಗುಳ್ಳೇದಗುಡ್ಡ) : ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ 1996-97ನೇ ಸಾಲಿಗೆ ಬಿಡುಗಡೆಯಾದ ಅನುದಾನ ಎಷ್ಟು?*